ವ್ಯಾಪಾರಿ ಸಂಸ್ಥೆಗೆ ತಲುಪಿಸುವ ಕಾರ್ಯವನ್ನು ಗುತ್ತಿಗೆದಾರರಿಗೆ ವಹಿಸುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಆಗಿಂದಾಗ್ಗೆ ಲಭ್ಯವಾಗುವ ಹೆಚ್ಚುವರಿ ಬೆಲೆ ಏರಿಕೆಯನ್ನು ಎಲ್ಲಾ ಗುತ್ತಿಗೆದಾರರಿಗೆ ಸರಿಸಮಾನವಾಗಿ ನೀಡುತ್ತಿಲ್ಲ ಕಾರಣ ಇದನ್ನು ಆಯಾಯ ಗುತ್ತಿಗೆದಾರರು, ಸಂಸ್ಥೆಯೊಂದಿಗೆ ಈ ಬಗ್ಗೆ ಒಪ್ಪಿ ಮಾಡಿಕೊಂಡಿರುವ ಕರಾರು ಪತ್ರದಲ್ಲಿ ಸೂಚಿಸಿರುವಂತೆ ನೀಡಲಾಗುತ್ತಿದೆ.

ಇ) ಮೈಸೂರು ಮಿನರಲ್ಸ್ ಸಂಸ್ಥೆಯು ತನಗೆ ಆಗಿಂದಾಗ್ಗೆ ದೊರೆಯುವ ಬೆಲೆಯ ಹೆಚ್ಚುವರಿಯನ್ನು ಆಯಾಯ ಗಣಿಗಳಲ್ಲಿ ದೊರೆಯುವ ಅದಿರಿನ ದರ್ಜೆ, ಅದರೊಟ್ಟಿಗಿನ ಇತರೆ ಕೆಳದರ್ಜೆ ಅದಿರು ಅಥವಾ ಕೆಟ್ಟ ಕಲ್ಲುಗಳ ಪ್ರಮಾಣ ಅದಿರಿನ ಲಭ್ಯತೆ ಪ್ರಮಾಣವನ್ನಾಧರಿಸಿ, ಗುತ್ತಿಗೆಯ ಕರಾರು ಪತ್ರವನ್ನು ತಯಾರಿಸುವಾಗ ಗುತ್ತಿಗೆದಾರರು ಒಪ್ಪಿಗೆಯ ಮೇಲೆ, ಕರಾರಿನಲ್ಲಿಯೇ ಹೆಚ್ಚುವರಿ ಬೆಲೆ ಏರಿಕೆಯನ್ನು ಹಂಚಿಕೊಳ್ಳುವ ರೀತಿಯನ್ನು ನಿಗದಿಪಡಿಸಲಾಗಿದೆ. ಇದು ಮೇಲೆ ತಿಳಿಸಿದ ಪರಿಸ್ಥಿತಿಗಳಿಗನುಸಾರವಾಗಿ ವಿವಿಧ ಪ್ರಮಾಣಗಳಲ್ಲಿದೆ. ಇದಕ್ಕೆ ಗುತ್ತಿಗೆದಾರರು ಕರಾರಿನಲ್ಲಿ ಒಪ್ಪಿಗೆ ನೀಡಿರುತ್ತಾರೆ. ಆದುದರಿಂದ ಅದರಂತೆ ಹೆಚ್ಚುವರಿ ಬೆಲೆ ಏರಿಕೆಯನ್ನು ಸಂಸ್ಥೆ ಮತ್ತು ಗುತ್ತಿಗೆದಾರರಲ್ಲಿ ಹಂಚಿಕೊಳ್ಳಲಾಗಿದೆ. ಇದರಲ್ಲಿ ಯಾವುದೇ ರೀತಿಯ ತಾರತಮ್ಯವನ್ನು ತೋರಿಸಿರುವುದಿಲ್ಲ.

ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ಕುರಿತು

193 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ಈಗಿನ ಸರ್ಕಾರ ನೌಕರರ ನಿವೃತ್ತಿ ವಯಸ್ಸೆಷ್ಟು?

ಆ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 58 ಹೊಂದಿರುವ ರಾಜ್ಯಗಳ ಸಂಖ್ಯೆ ಎಷ್ಟು?

ಇ) 55 ವರ್ಷ ನಿವೃತ್ತಿ ವಯಸ್ಸು ಹೊಂದಿರುವ ರಾಜ್ಯಗಳಾವುವು?

ಈ) ಕರ್ನಾಟಕ ರಾಜ್ಯದಲ್ಲಿ ನಿವೃತ್ತಿ ವಯಸ್ಸನ್ನು ಇಳಿಸುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ?

ಉ) ಹಾಗಿದ್ದಲ್ಲಿ, ಅದಕ್ಕೆ ಕಾರಣ.

ಊ) ಸರ್ಕಾರಿ ನೌಕರರು ತಮ್ಮ ಕೆಲಸದಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ನಿರ್ದಿಷ್ಟ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) 58 ವರ್ಷಗಳು.

ಆ) ಎಲ್ಲಾ ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಇ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ರಿಂದ 55ಕ್ಕೆ ಇಳಿಸುವ ಬಗ್ಗೆ ಈ ಹಿಂದೆ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ 31-3-91ರ ನಂತರ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ಈ) ಇಲ್ಲ.

ಉ) (ಈ) ಹಾಗೂ (ಉ)ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.